ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಗುಂಡ್ಲುಪೇಟೆ

**ಸಿಸಿ ನಂಃ 53/2018**

| | | |
|---|---|---|
| ಸಾಕ್ಷಿದಾರರ ಹೆಸರು | ಮಹಂತೇಶ್ ಎಸ್ ಕುಂಬಾರ್ | ಪ್ರಮಾಣ ವಚನ ಬೋಧಿಸಿದ ದಿನಾಂಕಃ 07.11.2025 |
| ತಂದೆಯ ಹೆಸರು/ ಗಂಡನ ಹೆಸರು | ಸಾಬು | |
| ವಯಸ್ಸು | 32 ವರ್ಷ | |
| ಉದ್ಯೋಗ | ಡಿ.ಆರ್.ಎಫ್.ಓ., ಎಂ.ಎಂ. ಹಿಲ್ಸ್ | ಪ್ರಾಸಾಃ 1 |
| ವಾಸ | ಮಲೆ ಮಹದೇಶ್ವರ ಬೆಟ್ಟ | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ ಕಲಂ 299 ಸಿ.ಆರ್.ಪಿ.ಸಿ ರಡಿಯಲ್ಲಿ**

ನಾನು 01.06.2019 ರಿಂದ 13.05.2025 ರವರಗೆ ಬಂಡೀಪುರ ಹುಲಿ ಸಂರಕ್ಷಿತ ವ್ಯಾಪ್ತಿಯ ಹಿಡಿಯಾಲ ವಲಯದಲ್ಲಿ, ಡಿ.ಆರ್.ಎಫ್.ಓ.,ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಮಾನ್ಯ ನ್ಯಾಯಾಲಯದ ಆದೇಶದ ಪ್ರಕಾರ ದಿಃ 17.07.2019ರಂದು ವೈನಾಡು ಜಿಲ್ಲೆ, ಸುಲ್ತಾನ್ ಬತ್ತೇರಿ ತಾಲ್ಲೂಕಿನ ಪಾರಕ್ಕಡವು ಗ್ರಾಮದ 1ನೇ ಆರೋಪಿಯಾದ ಶೈಜು ಅಲೀಯಾಸ್ ಅಪ್ಪಿ ರವರ ವಾಸದ ಮನೆಯ ಮುಂದೆ ಹೋಗಿ ಆರೋಪಿಯ ಬಗ್ಗೆ ವಿಚಾರಣೆ ಮಾಡಲಾಗಿ ಆರೋಪಿಯು ಸುಮಾರು ದಿನಗಳಿಂದ ಸದರಿ ಗ್ರಾಮದಲ್ಲಿ ವಾಸವಿರದೆ ತಲೆ ಮರೆಸಿಕೊಂಡಿರುತ್ತಾನೆ ಎಂದು ಅವರ ಮನೆಯವರು ಹಾಗೂ ಪಂಚಾಯ್ತುದಾರರು ತಿಳಿಸಿರುತ್ತಾರೆ. ಆಗ ಪಂಚಾಯ್ತುದಾರರನ್ನು ಸ್ಥಳಕ್ಕೆ ಬರಮಾಡಿಕೊಂಡು ಪಂಚಾಯ್ತುದಾರರಿಗೆ ಈ ವಿಷಯವನ್ನು ತಿಳಿಸಿ ಸದರಿ ಗ್ರಾಮದಲ್ಲಿ ಟಾಂ ಟಾಂ ಗೊಳಿಸಿ ಸದರಿ ಉದ್ಘೋಷಣಾ ಕಾಪಿಯ ನಕಲನ್ನು ಶಾಲೆ ಮತ್ತು ಮನೆಯ ಮುಂಭಾಗ ಅಂಟಿಸಿ ಜಾರಿಗೊಳಿಸಿರುತ್ತೇನೆ. ಆ ಬಗ್ಗೆ ಪಂಚರ ಸಮಕ್ಷಮ ಮಧ್ಯಾಹ್ನ 03.30 ರಿಂದ 04.30 ರವರೆಗೆ ಮಹಜರ್ ಜರುಗಿಸಿರುತ್ತೇನೆ.

ಸದರಿ ಮಹಜರ್ ನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಮಾನ್ಯ ನ್ಯಾಯಾಲಯದ ಆದೇಶದ ಪ್ರಕಾರ ದಿಃ 02.12.2023 ರಂದು ವೈನಾಡು ಜಿಲ್ಲೆ, ಸುಲ್ತಾನ್ ಬತ್ತೇರಿ ತಾಲ್ಲೂಕಿನ ಪುತ್ತಾಡಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಇರುಳಂ ಹಳಿಯ
ಅತಿರತ್ತು ಕುನ್ನು ಪ್ರದೇಶಕ್ಕೆ ಹೋಗಿ 6ನೇ ಆರೋಪಿಯಾದ ಸುಭಾಷ್ ರವರ ವಾಸದ ಮನೆಯ ಮುಂದೆ ಹೋಗಿ ಆರೋಪಿಯ ಬಗ್ಗೆ ವಿಚಾರಣೆ ಮಾಡಲಾಗಿ ಆರೋಪಿಯು ಈಗ ಸುಮಾರು 12-13 ವರ್ಷಗಳಿಂದ ಮನೆ ಬಿಟ್ಟ ಹೋದವನ್ನು ಇಲ್ಲಿಯವರೆಗೆ ವಾಪಸ್ಸು ಬಂದಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಆಗ ಪಂಚಾಯ್ತುದಾರರನ್ನು ಸ್ಥಳಕ್ಕೆ

ಬರಮಾಡಿಕೊಂಡು ಪಂಚಾಯ್ತುದಾರರಿಗೆ ಈ ವಿಷಯವನ್ನು ತಿಳಿಸಿ ಸದರಿ ಗ್ರಾಮದಲ್ಲಿ ಟಾಂ ಟಾಂ ಗೊಳಿಸಿ ಸದರಿ ಉದ್ಘೋಷಣಾ ಕಾಪಿಯ ನಕಲನ್ನು ಬಸ್ಸ ನಿಲ್ದಾಣ, ಆರೋಪಿಯ ಮನೆ ಹಾಗೂ ಇತರೆ ಕಡೆಗಳಲ್ಲಿ ಅಂಟಿಸಿ ಜಾರಿಗೊಳಿಸಿರುತ್ತೇನೆ. ಆ ಬಗ್ಗೆ ಪಂಚರ ಸಮಕ್ಷಮ ಸಂಜೆ 05.20 ರಿಂದ 06.10 ರವರೆಗೆ ಮಹಜರ್ ಜರುಗಿಸಿರುತ್ತೇನೆ.

ಸದರಿ ಮಹಜರ್ ನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–2 ಎಂದು ಮತ್ತು ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು.

ಮಾನ್ಯ ನ್ಯಾಯಾಲಯದ ಆದೇಶದ ಪ್ರಕಾರ ದಿಃ 02.12.2023 ರಂದು ವೈನಾಡು ಜಿಲ್ಲೆ, ಸುಲ್ತಾನ್ ಬತ್ತೇರಿ ತಾಲ್ಲೂಕಿನ ಮೂಳಂ ಕೊಲ್ಲಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಶಶಿಮಾಲಾ ಪಿಜ ಪಾರಕಡುವಿನ 8ನೇ ಆರೋಪಿಯಾದ ಆಧಿವಾಸಿ ಶಶಿರವರ ಮನೆಯ ಹತ್ತಿರ ಹೋಗಿ ಆರೋಪಿಯ ಬಗ್ಗೆ ವಿಚಾರಣೆ ಮಾಡಲಾಗಿ ಆರೋಪಿಯು ಕೆಲಸಕ್ಕೆಂದು ಒಂದು ತಿಂಗಳ ಹಿಂದೆ ಹೋದವನು ಇಲ್ಲಿಯವರೆಗೂ ವಾಪಸ್ಸು ಬಂದಿರುವುದಿಲ್ಲ ಎಂದು ಅವರ ಮನೆಯವರು ತಿಳಿಸಿರುತ್ತಾರೆ. ಆಗ ಪಂಚಾಯ್ತುದಾರರನ್ನು ಸ್ಥಳಕ್ಕೆ ಬರಮಾಡಿಕೊಂಡು ಪಂಚಾಯ್ತುದಾರರಿಗೆ ಈ ವಿಷಯವನ್ನು ತಿಳಿಸಿ ಸದರಿ ಗ್ರಾಮದಲ್ಲಿ ಟಾಂ ಟಾಂ ಗೊಳಿಸಿ ಸದರಿ ಉದ್ಘೋಷಣಾ ಕಾಪಿಯ ನಕಲನ್ನು ಬಸ್ಸ ನಿಲ್ದಾಣ, ದೇವಸ್ಥಾನ ಹಾಗೂ ಇತರೆ ಕಡೆಗಳಲ್ಲಿ ಅಂಟಿಸಿ ಜಾರಿಗೊಳಿಸಿರುತ್ತೇನೆ. ಆ ಬಗ್ಗೆ ಪಂಚರ ಸಮಕ್ಷಮ ಮಧ್ಯಾಹ್ನ 12.10 ರಿಂದ 01.20 ರವರೆಗೆ ಮಹಜರ್ ಜರುಗಿಸಿರುತ್ತೇನೆ.

ಸದರಿ ಮಹಜರ್ ನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–3 ಎಂದು ಮತ್ತು ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು.

ಅದೇ ರೀತಿ 1 ಮತ್ತು 6ನೇ ಆರೋಪಿಗಳಿಗೆ ಸಂಬಂಧಿಸಿದಂತೆ ಚರ ಮತ್ತು ಸ್ಥಿರ ಆಸ್ತಿಗಳ ಬಗ್ಗೆ ಕೋರಿ ತಹಶೀಲ್ದಾರ್, ಸುಲ್ತಾನ್ ಬತ್ತೇರಿ ರವರಿಗೆ ಅರ್ಜಿ ನೀಡಲಾಗಿ ಸದರಿಯವರು 1ನೇ ಆರೋಪಿಯಾದ ಶೈಜು, 8ನೇ ಆರೋಪಿಯಾದ ಆದಿವಾಸಿ ಶಶಿ ರವರಿಗೆ ಸಂಬಂಧಿಸಿದಂತೆ ಯಾವುದೇ ಆಸ್ತಿಗಳು ಇರುವುದಿಲ್ಲ ಎಂದು ಹಾಗೂ 6ನೇ ಆರೋಪಿಯಾದ ಸುಭಾಷ್ ಈತನಿಗೆ ಸಂಬಂಧಿಸಿದಂತೆ ಇರುಳಂ ಗ್ರಾಮದ ಸರ್ವೆ ನಂ. 66/18ರಲ್ಲಿ 0.0608 ಹೆಕ್ಟರ್ ಡ್ರೈ ಲ್ಯಾಂಡ್ ಇರುತ್ತದೆ ಎಂದು ವರದಿ ನೀಡಿರುತ್ತಾರೆ. ಸದರಿ ವರದಿಯನ್ನು ನೋಡುತ್ತಿದ್ದು, ಅದನ್ನು ನಿಪಿ–4 ಎಂದು ಗುರುತಿಸಲಾಯಿತು.

1 ಮತ್ತು 8ನೇ ಆರೋಪಿಗಳಿಗೆ ಸಂಬಂದಿಸಿದಂತೆ ಕಾರ್ಯದರ್ಶಿ, ಗ್ರಾಮ ಪಂಚಾಯ್ತಿ ಮುಳ್ಳಾನ ಕೊಲ್ಲಿ ರವರಿಗೆ ಅರ್ಜಿಯನ್ನು ನೀಡಿದ್ದು, ಸದರಿಯವರು 1ನೇ ಆರೋಪಿಯಾದ ಶೈಜು ಮತ್ತು 8ನೇ ಆರೋಪಿಯಾದ ಆದಿವಾಸಿ ಶಶಿರವರಿಗೆ ಸಂಬಂಧಿಸಿದಂತೆ ತಮ್ಮ ವ್ಯಾಪ್ತಿಯಲ್ಲಿ ಯಾವುದೇ ಆಸ್ತಿ ಇರುವುದಿಲ್ಲ ಎಂದು ವರದಿ ನೀಡಿರುತ್ತಾರೆ. ಸದರಿ ವರದಿಯನ್ನು ನೋಡುತ್ತಿದ್ದು, ಅದನ್ನು ನಿಪಿ–5 ಎಂದು ಗುರುತಿಸಲಾಯಿತು.

ಮಾನ್ಯ ನ್ಯಾಯಾಲಯದ ಆದೇಶದ ಪ್ರಕಾರ 6ನೇ ಆರೋಪಿಗೆ ಸಂಬಂಧಿಸಿದ ಆಸ್ತಿಯನ್ನು ಜಪ್ತಿ ಮಾಡುವಂತೆ ತಹಶೀಲ್ದಾರ್, ಸುತ್ತಾನ್ ಬತ್ತೇರಿ ರವರಿಗೆ ವರದಿ ನೀಡಿದ್ದು, ಆ ಪ್ರಕಾರ 6ನೇ ಆರೋಪಿಗೆ ಸಂಬಂಧಿಸಿದ ಆಸ್ತಿಯನ್ನು ಜಪ್ತಿ ಮಾಡಿರುವ ಬಗ್ಗೆ ವರದಿ ನೀಡಿದ್ದು, ಸದರಿ ವರದಿಯನ್ನು ನೋಡುತ್ತಿದ್ದು, ಅದನ್ನು ನಿಪಿ–6 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಇರುವುದಿಲ್ಲ.
( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ಜಡ್ಜ್ ಜೆಎಂಎಫ್ ಸಿ
ಗುಂಡ್ಲುಪೇಟೆ.